**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು**

**ದಿಃ11-06-2026**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀಮತಿ ಎಸ್ ಕೆ ವಕೀಲರಿಂದ**

ವಾದಿ ಮತ್ತು ನನ್ನ ತಮ್ಮ ಅನ್ಯಜಾತಿಯಲ್ಲಿ ಮದುವೆಯಾಗಿರುತ್ತಾರೆಂದರೆ ಗೊತ್ತಿಲ್ಲ. ವಿಭಾಗವು, ನನ್ನ, ನನ್ನ ಅಣ್ಣ ಬಸವರಾಜು ಉರುಫ್ ಬೆಟ್ಟಪ್ಪ ಮತ್ತು ತೊಂಟದಾರ್ಯ ರವರ ನಡುವೆ ಆಗಿರುತ್ತದೆ. ತೊಂಟದಾರ್ಯ ಎಂದರೆ ವಾದಿಯ ಗಂಡ ಇರುತ್ತಾರೆ. ದಾವ ಆಸ್ತಿ ಮೂಲತಃ ನನ್ನ ಅಜ್ಜನ ಆಸ್ತಿಯಾಗಿರುತ್ತದೆ. ವಿಭಾಗದ ಸಮಯದಲ್ಲಿ ಮನೆಯನ್ನು ಮೂರು ಭಾಗ ಮಾಡಿದ್ದು, ಅಳತೆಯನ್ನು ವಿಭಾಗ ಪತ್ರದಲ್ಲಿ ನಮೂದು ಮಾಡಿಲ್ಲ. ವಿಭಾಗ ಪತ್ರದಲ್ಲಿ ಅಳತೆ ಮಾಡಿ ಅಳತೆಯನ್ನು ನಮೂದು ಮಾಡಿರುತ್ತಾರೆಂದರೆ ಸರಿಯಲ್ಲ. ವಿಭಾಗ ಪತ್ರದಲ್ಲಿ ನಮೂದಿಸಿದ ಅಳತೆಯನ್ನು ಒಪ್ಪಿದ ನಂತರ ವಿಭಾಗ ಪತ್ರವಾಗಿರುತ್ತದೆ ಎಂದರೆ ಸರಿಯಲ್ಲ. ವಿಭಾಗ ಪತ್ರ ಸರಿ ಇರುತ್ತದೆ.

ನಿ ಪಿ 1 ರ ಇ ಷಡ್ಯೂಲ್ ಆಸ್ತಿ ವಾದಿಯ ಗಂಡನ ಪಾಲಿಗೆ ಹೋಗಿರುತ್ತದೆ ಎಂದರೆ ಇರಬಹುದು. ನನ್ನ ಮತ್ತು ವಾದಿಯರ ಮನೆಯ ಮಧ್ಯದಲ್ಲಿ ಸಾಮಾನ್ಯ ಗೋಡೆ ಇದೆ ಎಂದರೆ ಸರಿ. ವಾದಿಯ ಗಂಡನ ಹಿಸ್ಸೆಗೆ 22*16 ಅಡಿ ಹೆಂಚಿನ ಮನೆ ಎಂದು ನಮೂದು ಮಾಡಿರುತ್ತಾರೆಂದರೆ ಸರಿ. ಅದಕ್ಕೆ ಲಗತ್ತಾಗಿ 14 ಅಡಿ ಉದ್ದ, 9.5 ಅಡಿ ಅಗಲ ಜಾಗ ಇರುವ ಮಣ್ಣು ಗೋಡೆವುಳ್ಳ ಶೀಥಿಲ ಮನೆ ಎಂದು ನಮೂದು ಮಾಡಿರುತ್ತಾರೆಂದರೆ ಸಾಕ್ಷಿ ಸದರಿ ಜಾಗ ಇರುವುದಿಲ್ಲ ಎಂದು ನುಡಿಯುತ್ತಾರೆ. ವಿಭಾಗ ಪತ್ರದಲ್ಲಿ ಚೆಕ್ಕುಬಂದಿ ಸಹ ನಮೂದು ಮಾಡಿರುತ್ತಾರೆಂದರೆ ಸಾಕ್ಷಿ ಅದು ತಪ್ಪಾಗಿ ನಮೂದು ಮಾಡಿರುತ್ತಾರೆಂದು ನುಡಿಯುತ್ತಾರೆ. ಎಲ್ಲ ಆಸ್ತಿ ಚೆಕ್ಕುಬಂದಿಗಳನ್ನು ಓದಿದ ನಂತರ ವಿಭಾಗ ಪತ್ರಕ್ಕೆ ಸಹಿ ಮಾಡಿರುತ್ತೇವೆಂದರೆ ಸರಿಯಲ್ಲ. ನಿ ಪಿ 1 ವಿಭಾಗ ಪತ್ರದಲ್ಲಿ ನಮೂದಿಸಿರುವಂತೆ ಪೂರ್ವ ಪಶ್ಚಿಮ 13 ಅಡಿ 5 ಅಂಗುಲ ಮತ್ತು ದಕ್ಷಿಣ ಉತ್ತರ 12 ಅಡಿಗಳ್ಳುಳ ಜಾಗದಲ್ಲಿ ಮಣ್ಣು ಗೋಡೆ, ಮರದ ರಿಪೀಸು ಮತ್ತು ಶೀಟ್ ಕಟ್ಟಿರುವ ಎಂದು ರೂಂ ಬಂದಿರುತ್ತದೆ ಎಂದು ನಮೂದು ಇದೆ ಎಂದರೆ ಸದರಿ ಜಾಗವನ್ನು ವಾದಿಯ ಗಂಡ ನನ್ನ ಅಕ್ಕನಿಗೆ ಮಾರಾಟ ಮಾಡಿರುತ್ತಾರೆಂದು ನುಡಿಯುತ್ತಾರೆ.

ವಾದಿ ಗಂಡನಿಗೆ ಪೂರ್ವ ಪಶ್ಚಿಮ 28 ಅಡಿ ಮತ್ತು ದಕ್ಷಿಣ ಉತ್ತರ 20 ಅಡಿ ನಿವೇಶನ ಸಹ ಇರುತ್ತದೆ ಎಂದರೆ ಸರಿ. ಸದರಿ ನಿವೇಶನದ ದಕ್ಷಿಣ ದಿಕ್ಕಿಗೆ ನಾನು ಇರುತ್ತೇನೆಂದರೆ ಸರಿ.

ನಿ ಪಿ 2 ನಕ್ಷೆಯ ಪ್ರಕಾರ ನಿ ಪಿ 1 ವಿಭಾಗ ಪತ್ರ ನೋಂದಾಣಿಯಾಗಿರುತ್ತದೆ ಎಂದರೆ ಸದರಿ ನಕ್ಷೆಯನ್ನು ನಾವು ಒಪ್ಪಿಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ನಿ ಪಿ 1 ವಿಭಾಗ ಪತ್ರವನ್ನು ಒಪ್ಪಿಕೊಂಡಿರುತ್ತೇವೆ. ನನ್ನ ಸಹೋದರ ಮರಣದ ನಂತರ ಅವರ ಆಸ್ತಿಗಳು ವಾದಿಯ ಹೆಸರಿಗೆ ವರ್ಗಾವಣೆ ಯಾಗಿವೆ ಎಂದರೆ ಸಾಕ್ಷಿ ಅವರ ಸ್ವಾಧೀನದಲ್ಲಿರುವ ಆಸ್ತಿಗಳು ಅವರ ಹೆಸರಿಗೆ ಆಗಿರುತ್ತದೆ. ನಮ್ಮ ಸ್ವಾಧೀನದಲ್ಲಿರುವ ಆಸ್ತಿಗಳು ನಮ್ಮ ಹೆಸರಿನಲ್ಲಿರುತ್ತದೆ ಎಂದು ನುಡಿಯುತ್ತಾರೆ. ವಿಭಾಗ ಪತ್ರದ ಸಮಯದಲ್ಲಿ ವಿಭಾಗದಂತೆ ನನ್ನ ಮತ್ತು ವಾದಿಯ ಮನೆಯ ಮಧ್ಯದಲ್ಲಿ ಯಾವುದೇ ಮರದ ಹಲಿಗೆಗಳಿಂದ ಅಡ್ಡಗಟ್ಟಿ ಇರುವ ಬಗ್ಗೆ ನಮೂದು ಆಗಿಲ್ಲ ಎಂದರೆ ಸರಿ. ಆದರೆ ವಿಭಾಗ ಪೂರ್ವದಿಂದಲೂ ಸದರಿ ಗೋಡೆ ಇರುತ್ತದೆ ಎಂದು ನುಡಿಯುತ್ತಾರೆ.

22*16 ಅಡಿ ಜಾಗ ವಾದಿಯ ಗಂಡನ ಹಿಸ್ಸೆಗೆ ಬಂದಿದ್ದರೂ ಸಹ ವಾದಿಯ ಹಿಸ್ಸೆಯ ಜಾಗವನ್ನು ಸೇರಿಸಿಕೊಂಡು ಸದರಿ ಹಲಗೆಯಿಂದ ಅಡ್ಡ ಹಾಕಿರುತ್ತೇವೆಂದರೆ ಸರಿಯಲ್ಲ. ವಿಭಾಗ ಪತ್ರದಲ್ಲಿ ನನ್ನ ಹಿಸ್ಸೆಗೆ ಸ್ವಾಧೀನ ರೀತಿ ಅಳತೆ ಮಾಡಿಕೊಂಡಿರುತ್ತೇವೆ. ಆದರೆ ನಿಖರವಾದ ಅಳತೆ ಮಾಡಿರುವುದಿಲ್ಲ. ನನ್ನ ಹಿಸ್ಸೆಗೆ ಪೂರ್ವ ಪಶ್ಚಿಮ 49 ಅಡಿ, ಉತ್ತರ ದಕ್ಷಿಣ 22 ಅಡಿ ಮತ್ತು ಇನ್ನೊಂದು ಜಾಗ ಪೂರ್ವ ಪಶ್ಚಿಮ 28 ಅಡಿ, ಉತ್ತರ ದಕ್ಷಿಣ 50 ಅಡಿ ಜಾಗ ಬಂದಿರುತ್ತದೆ ಎಂದರೆ ಸಾಕ್ಷಿ ಅಳತೆ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಈ ದಾವೆ ವಿವಾದ ನಿ ಪಿ 2 ನಕ್ಷೆಯ ಬಿ ಮತ್ತು ಸಿ ಮಧ್ಯದಲ್ಲಿರುವ ಜಾಗದ ವಿವಾದವಾಗಿರುತ್ತದೆ ಎಂದರೆ ಸರಿಯಲ್ಲ.

ಭಾಗ ಮಾಡಿಕೊಂಡಿರುವ ನನ್ನ ಮತ್ತು ವಾದಿಯ ಮನೆ ಹಂಚಿನ ಮನೆಯಾಗಿರುತ್ತದೆ ಎಂದರೆ ಸರಿ. ವಿಭಾಗ ಮಾಡಿಕೊಂಡಿರುವ ಮನೆಗೆ ಒಂದೇ ಹಟ್ಟಿ ಇರುತ್ತದೆ ಎಂದರೆ ಸರಿ. ಸದರಿ ಹಟ್ಟಿವನ್ನು ನನ್ನ ಹಿಸ್ಸೆಗೆ ಸೇರಿಸಿರುತ್ತಾರೆ. ಹಟ್ಟಿಕ್ಕೆ ಹೋಗುವ ಏಣಿ ಸಹ ನನ್ನ ಹಿಸ್ಸೆಯಲ್ಲಿರುತ್ತದೆ ಎಂದರೆ ಸರಿ. ಸದರಿ ಹಟ್ಟಿಕ್ಕೆ ವಾದಿ ಹೋಗಲು ಯಾವುದೇ ದಾರಿ ಇಲ್ಲ ಎಂದರೆ ಸರಿ. ಸದರಿ ಹಟ್ಟಿವನ್ನು ನಾನೇ ಉಪಯೋಗಿಸುತ್ತಿದ್ದೇನೆಂದರೆ ಸರಿ. ಮಳೆಗಾಲದಲ್ಲಿ ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಹಟ್ಟಿದಿಂದ ಹೋಗಿ ವಾದಿಯ ಮನೆಯ ಹಂಚನ್ನು ತೆಗೆದು ಮಳೆ ನೀರು ಒಳಗೆ ಬರುವಂತೆ ಮಾಡುತ್ತಿದ್ದು ಅವರು ಮಕ್ಕಳು ಓದಿಕೊಳ್ಳದ ಹಾಗೇ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಸದರಿ ಮನೆಯ ಸಲುವಾಗಿ ಸಾಕಷ್ಟು ಬಾರಿ ಪೊಲೀಸಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ ಎಂದರೆ ಸರಿಯಲ್ಲ.

ನನ್ನ ಸಹೋದರ ಮರಣ ಹೊಂದಿ 15-20 ವರ್ಷ ಆಗಿರಬಹುದು. ಆಗ ಅವರ ಮಕ್ಕಳು ಸಣ್ಣವರಾಗಿದ್ದರು ಎಂದರೆ ಸರಿ. ಆ ಸಮಯದಲ್ಲಿ ನಾನು ಅವರ ಮಕ್ಕಳ ಪಾಲನೆ ಪೋಷಣೆ ಮಾಡದೇ ತೊಂದರೆ ನೀಡಿರುತ್ತೇನೆಂದರೆ ಸರಿಯಲ್ಲ. ಅವರನ್ನು ಅವ್ಯಾಚ್ಯ ಶಬ್ದಗಳಿಂದ ಬೈಯುತ್ತಿದ್ದೆ ಎಂದರೆ ಸರಿಯಲ್ಲ. ನನ್ನ ತಮ್ಮನ ಹಿಸ್ಸೆಯಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿ. ವಾದಿಯ ಹಿಸ್ಸೆಯ ಸ್ವತ್ತಿನಲ್ಲಿ ಅಡ್ಡಗಟ್ಟಿರುವ ಹಲಗೆ ಜಾಗವನ್ನು ನನಗೆ ಬಿಟ್ಟುಕೊಂಡುವಂತೆ ಗಲಾಟೆ ಮಾಡಿರುತ್ತೇನೆಂದರೆ ಸರಿಯಲ್ಲ. ಆ ಸಲುವಾಗಿ ರಾಜಿ ಪಂಚಾಯಿತಿ ಸಹ ಆಗಿರುತ್ತದೆ ಎಂದರೆ ಸರಿಯಲ್ಲ. ವಾದಿ ಸ್ವತ್ತಿನ ಉತ್ತರಕ್ಕೆ ನಾನೇ ಇರುತ್ತೇನೆ. ದಕ್ಷಿಣಕ್ಕೆ ನನ್ನ ಅಣ್ಣ ಇರುತ್ತಾರೆ. ವಾದಿ ಮತ್ತು ನನ್ನ ಹಿರಿಯ ಅಣ್ಣನ ಸ್ವತ್ತಿನ ದಕ್ಷಿಣಕ್ಕೆ ಸಾಮಾನ್ಯ ಗೋಡೆ ಇರುತ್ತದೆ ಅದು ಈಗಲೂ ಇರುತ್ತದೆ.

ವಿಭಾಗ ಪತ್ರದಲ್ಲಿ ವಾದಿಯ ಸ್ವತ್ತಿನ ದಕ್ಷಿಣ ದಿಕ್ಕಿಗೆ ಸಾಮಾನ್ಯ ಗೋಡೆ ಇದೆ ಎಂದು ನಮೂದು ಮಾಡಿರುತ್ತಾರೆಂದರೆ ಸರಿ. ಉತ್ತರಕ್ಕೂ ಸಹ ಸಾಮಾನ್ಯ ಗೋಡೆ ಇದೆ ಎಂದು ನಮೂದು ಮಾಡಿರುತ್ತಾರೆಂದರೆ ಸರಿ. ವಾದಿಯ ದಾಖಲಾತಿಗಳನ್ನು ನಾನು ನೋಡಿರುವುದಿಲ್ಲ. ನನ್ನ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ. ದಾವ ಆಸ್ತಿಯ ದಕ್ಷಿಣ ದಿಕ್ಕಿಗೆ ಸಾಮಾನ್ಯ ಗೋಡೆ ಇರುವುದರಿಂದ ವಾದಿ ಮತ್ತು ನನ್ನ ಅಣ್ಣನ ನಡುವೆ ಯಾವುದೇ ತಕರಾರು ಇಲ್ಲದೇ ಇರುವುದರಿಂದ ಅವರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿ ದಕ್ಷಿಣಕ್ಕೂ ಒತ್ತುವರಿ ಆಗಿರಬಹುದಾಗಿರುವುದರಿಂದ ಅವರು ಅವಶ್ಯ ಪಕ್ಷಗಾರರಾಗಿರುತ್ತಾರೆಂದು ನುಡಿಯುತ್ತಾರೆ.

ವಿಭಾಗ ಪತ್ರದ ಪ್ರಕಾರ ವಾದಿಯರಿಗೆ ಆದೇಶವಾದರೆ ತೊಂದರೆ ಇರುವುದಿಲ್ಲ ಎಂದರೆ ನಮ್ಮ ಜಾಗದ ಬಗ್ಗೆ ಆದೇಶವಾದರೆ ತೊಂದರೆ ಇರುತ್ತದೆ ಎಂದು ನುಡಿಯುತ್ತಾರೆ. ವಾದಿ ಈ ದಾವೆಯನ್ನು ನಾನು ಒತ್ತುವರಿ ಮಾಡಿರುತ್ತೇನೆಂದು ದಾವೆ ಹೂಡಿರುತ್ತಾರೆ. ನ್ಯಾಯಾಲಯದಿಂದ ಅಳತೆಗಾಗಿ ಸ್ಥಳ ಪರಿಶೀಲನೆ ಮಾಡಿಸಲು ನನಗೆ ತೊಂದರೆ ಇರುವುದಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.**

**ಮರುವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

**ಪ್ರಧಾನ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**